# ನೆಲಮಂಗಲ ಯೋಜನಾ ಪ್ರಾಧಿಕಾರ

## 2017–18 ನೇ ಸಾಲಿನ ವಾರ್ಷಿಕ ವರದಿ
## (ದಿನಾಂಕ:01–04–2017 ರಿಂದ 31–03–2018 ರವರೆಗೆ)

**2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**Web: www.npa.in**

**ಪ್ರಸ್ತಾವನೆ ( Introduction )**

ನೆಲಮಂಗಲ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಲ್ಲಿ ಒಂದಾಗಿದ್ದು, ಈ ಪ್ರಾಧಿಕಾರದ ಕಛೇರಿ, 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನೂತನವಾಗಿ ನಿರ್ಮಿಸಿರುವ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾಧಿಕಾರದ ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಸದಸ್ಯ-ಕಾರ್ಯದರ್ಶಿಗಳು, ಪ್ರಾಧಿಕಾರದ ಎಲ್ಲಾ ಕಾರ್ಯ ಚಟುವಟಿಕೆಗಳ ಸಂಬಂಧ ಕಾರ್ಯ ನಿರ್ವಹಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

**ನೆಲಮಂಗಲ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ.**

ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿನ 11 ಪ್ರಾಧಿಕಾರಗಳಲ್ಲಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ಉತ್ತರ-ಪಶ್ಚಿಮ (ವಾಯುವ್ಯ) ಭಾಗದಲ್ಲಿರುತ್ತದೆ. ಈ ಮೊದಲು ಸರ್ಕಾರದಿಂದ ಅನುಮೋದಿಸಿದ ರಚನಾ ನಕ್ಷೆಯಂತೆ APZ-2 ಮತ್ತು IZ-2(ಪಿ) ಹಾಗೂ 3(ಪಿ) ರಲ್ಲಿ ಬರುತ್ತಿದ್ದು, ಸದರಿ ಪ್ರದೇಶದಲ್ಲಿ ಬೆಳವಣಿಗೆಗಳನ್ನು ನೇರವಾಗಿ ಬಿ.ಎಂ.ಆರ್.ಡಿ.ಎ ಕಾಯ್ದೆಯಡಿಯಲ್ಲಿ ನಿಯಂತ್ರಿಸಲಾಗುತ್ತಿತ್ತು. ನಂತರದಲ್ಲಿ ಸರ್ಕಾರದಿಂದ ಅನುಮೋದಿತ ರಚನಾ ನಕ್ಷೆಯಂತೆ ಸದರಿ ಪ್ರದೇಶವನ್ನು ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವಾಗಿ ಘೋಷಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಎ) ರಂತೆ ಸರ್ಕಾರದ ಆದೇಶ ಸಂ.ನಅಇ:63:ಟಿಟಿಪಿ:1996 ದಿನಾಂಕ:27-01-1997 ರಂತೆ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ನೆಲಮಂಗಲ ತಾಲ್ಲೂಕಿನ 243 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು ಮತ್ತು ಮಾಗಡಿ ತಾಲ್ಲೂಕಿನ 60 ಗ್ರಾಮಗಳು ಸೇರಿ ಒಟ್ಟು 345 ಗ್ರಾಮಗಳು ಇದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 735 ಚ.ಕಿ.ಮೀ (73408.85 ಹೆಕ್ಟೇರ್) ಇರುತ್ತದೆ.

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಮಾರ್ಪಡಿತ ಸ್ಥಳೀಯ ಯೋಜನಾ ಪ್ರದೇಶವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ.ನಅಇ:141:ಬಿಎಂಆರ್:2015 ದಿನಾಂಕ:08-12-2015 ರಲ್ಲಿ ಘೋಷಿಸಲಾಗಿದ್ದು,ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ನೆಲಮಂಗಲ ತಾಲ್ಲೂಕಿನ 243 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು, ಮಾಗಡಿ ತಾಲ್ಲೂಕಿನ 60 ಗ್ರಾಮಗಳು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳು ಒಳಗೊಂಡಂತೆ ಒಟ್ಟು 382 ಗ್ರಾಮಗಳು ಇದ್ದು, ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 830.41 ಚ.ಕಿ.ಮೀ (83041.70 ಹೆಕ್ಟೇರ್) ಇರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ.ನಅಇ:36:ಬಿಎಂಆರ್:2016 ದಿನಾಂಕ:24-06-2016 ರಲ್ಲಿ ಉಪನಗರ ವರ್ತುಲ ರಸ್ತೆ (ಎಸ್‌ಟಿಆರ್‌ಆರ್) ಸ್ಥಳೀಯ ಯೋಜನಾ ಪ್ರದೇಶ ರಚನೆಯಾಗಿದ್ದು, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ 64 ಪೂರ್ಣ ಗ್ರಾಮಗಳು ಮತ್ತು 01 ಭಾಗಶಃ ಗ್ರಾಮ ಸದರಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಕೊಂಡ ನಂತರ, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ನೆಲಮಂಗಲ ತಾಲ್ಲೂಕಿನ 205 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು, ಮಾಗಡಿ ತಾಲ್ಲೂಕಿನ 34 ಗ್ರಾಮಗಳು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳು ಸೇರಿ ಒಟ್ಟು 318 ಗ್ರಾಮಗಳು ಇರುತ್ತವೆ. ಸದರಿ ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣವು 68880.15 ಹೆಕ್ಟೇರ್ ಇರುತ್ತದೆ.

ತದನಂತರ ಸರ್ಕಾರದ ಅಧಿಸೂಚನೆ –II ಸಂಖ್ಯೆ.ನಅಇ:95:ಬಿಎಂಆರ್:2016 ದಿನಾಂಕ:30-11-2017 ರಲ್ಲಿ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶ ರಚನೆಯಾಗಿದ್ದು, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ದೊಡ್ಡಬಳ್ಳಾಪುರ ತಾಲ್ಲೂಕಿನ 37 ಗ್ರಾಮಗಳು ಸದರಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಸಿಕೊಂಡ ನಂತರ, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಪ್ರಸ್ತುತ ನೆಲಮಂಗಲ ತಾಲ್ಲೂಕಿನ 205 ಗ್ರಾಮಗಳು, ಬೆಂಗಳೂರು ಉತ್ತರ ತಾಲ್ಲೂಕಿನ 42 ಗ್ರಾಮಗಳು ಮತ್ತು ಮಾಗಡಿ ತಾಲ್ಲೂಕಿನ 34 ಗ್ರಾಮಗಳು ಸೇರಿ ಒಟ್ಟು 281 ಗ್ರಾಮಗಳು ಇರುತ್ತವೆ.

ಸರ್ಕಾರದ ಆದೇಶ ಸಂಖ್ಯೆ.ನಅಇ:204:ಟಿಟಿಪಿ:97 ದಿನಾಂಕ:14-07-1997 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಸಿ) ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ. ಅದರಂತೆ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಸದಸ್ಯ-ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ.ನಅಇ:83:ನಯೋಸೇ:2009 ಬೆಂಗಳೂರು ದಿನಾಂಕ:25-06-2009 ರಲ್ಲಿ ಪ್ರಾಧಿಕಾರದ ಸದಸ್ಯ-ಕಾರ್ಯದರ್ಶಿಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ಹುದ್ದೆಗೆ ಉನ್ನತೀಕರಿಸಿ ಆದೇಶಿಸಿರುವ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ:93:ನಯೋಸೇ:2009 ಬೆಂಗಳೂರು ದಿನಾಂಕ:26-08-2009 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ-ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ.ನಅಇ:213:ಬಿಎಂಆರ್:2016 ದಿನಾಂಕ:27-12-2016, ಸಂಖ್ಯೆ.ನಅಇ:160:ಬಿಎಂಆರ್:2016 ದಿನಾಂಕ: 19-12-2016 ಮತ್ತು ಸರ್ಕಾರದ ಪತ್ರ ಸಂಖ್ಯೆ.ನಅಇ:213:ಬಿಎಂಆರ್:2016 ದಿನಾಂಕ:28-12-2016 ರಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಿ ಆದೇಶಿಸಿಲಾಗಿದ್ದು, ಸದರಿ ಸಾಲಿನಲ್ಲಿ ದಿನಾಂಕ:01-04-2016 ರಿಂದ 31-03-2017 ರವರೆಗೆ ಕೆಳಕಂಡ ಅಧ್ಯಕ್ಷರು ಮತ್ತು ಸದಸ್ಯರುಗಳು ಕಾರ್ಯನಿರ್ವಹಿಸಿರುತ್ತಾರೆ.

| ಕ್ರ.ಸಂ | ಹುದ್ದೆ | ಹೆಸರು | ಕಾರ್ಯನಿರ್ವಹಿಸಿದ ಅವಧಿ |
|---|---|---|---|
| 1. | ಅಧ್ಯಕ್ಷರು | ಶ್ರೀ.ಡಿ.ಎಂ.ಪ್ರಕಾಶ್ | ದಿ:01-04-2017 ರಿಂದ 31-03-2018 |
| 2. | ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು | ಶ್ರೀಮತಿ ಎನ್.ಹೆಚ್.ಸುಮ | ದಿ:01-04-2017 ರಿಂದ 31-03-2018 |
| 3. | ಸದಸ್ಯರು | ಶ್ರೀ.ಹೆಚ್.ಜಿ.ರಾಜು | ದಿ:01-04-2017 ರಿಂದ 31-03-2018 |
| 4. | ಸದಸ್ಯರು | ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಸ್ಥಳೀಯ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಪೈಕಿ ಒಬ್ಬ ಪ್ರತಿನಿಧಿ | ದಿ:01-04-2017 ರಿಂದ 31-03-2018 |
| 5. | ಸದಸ್ಯರು | ಶ್ರೀ.ಡಿ.ಸಿ.ರಾಜಣ್ಣ | ದಿ:01-04-2017 ರಿಂದ 31-03-2018 |
| 6. | ಸದಸ್ಯರು | ಶ್ರೀ.ಎನ್.ಎಸ್.ಗಂಗಾಧರರಾವ್ | ದಿ:01-04-2017 ರಿಂದ 31-03-2018 |
| 7. | ಸದಸ್ಯರು | ಶ್ರೀ.ವಾಸುದೇವ | ದಿ:01-04-2017 ರಿಂದ 31-03-2018 |

**ನೆಲಮಂಗಲ ಯೋಜನಾ ಪ್ರಾಧಿಕಾರದ ಸಂಕ್ಷಿಪ್ತ ವರದಿ:**

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ 205 ಗ್ರಾಮಗಳು, ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ 42 ಗ್ರಾಮಗಳು ಮತ್ತು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ 34 ಗ್ರಾಮಗಳನ್ನು ಒಳಗೊಂಡಿರುತ್ತದೆ. ಸದರಿ ಯೋಜನಾ ಪ್ರದೇಶದ ಉತ್ತರಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕು, ದಕ್ಷಿಣಕ್ಕೆ ಮಾಗಡಿ ತಾಲ್ಲೂಕು, ಪೂರ್ವಕ್ಕೆ ಬೆಂಗಳೂರು ಉತ್ತರ ತಾಲ್ಲೂಕು, ಪಶ್ಚಿಮಕ್ಕೆ ತುಮಕೂರು ಜಿಲ್ಲೆಗಳು ಎಲ್ಲೆಯಾಗಿರುತ್ತವೆ. ನೆಲಮಂಗಲ ಪಟ್ಟಣವು ಬೆಂಗಳೂರಿನಿಂದ 30 ಕಿ.ಮೀ ದೂರದಲ್ಲಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ NH-4 ಮತ್ತು NH-48 ಹಾದು ಹೋಗುತ್ತವೆ.

**ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು**

1. ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆ ತಯಾರಿಕೆ: ಯೋಜನಾ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಂತೆ ಈ ಮಹಾ ಯೋಜನೆಯನ್ನು ಬಿಎಂಆರ್‌ಡಿಎ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು ಹಾಗೂ ಅನುಷ್ಠಾನ ಗೊಳಿಸುವುದು.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು.
3. ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
4. ಭೂ ಪರಿವರ್ತನೆ ಆಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕೆ ಮತ್ತು ಇತರೆ ಉದ್ದೇಶದ ವಿನ್ಯಾಸ ಅನುಮೋದನೆ ನೀಡುವುದು ಮತ್ತು ಕಟ್ಟಡವನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

**ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು:**

| ಕ್ರ.ಸಂ | ಅಧ್ಯಕ್ಷರು | ಸದಸ್ಯ-ಕಾರ್ಯದರ್ಶಿ | ಸದಸ್ಯರು |
|---|---|---|---|
| **1.** | ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು, 1965 ರನ್ವಯ ಪ್ರಾಧಿಕಾರದ ಸಭೆಯನ್ನು ಏರ್ಪಡಿಸುವುದು. | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ-4 (ಹೆಚ್)ರಂತೆ ಹಾಗೂ ಸಭೆಯ ನಿರ್ಣಯದಂತೆ ಕೆಲಸ ನಿರ್ವಹಿಸುವುದು | ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವುದು. |

**ಕರ್ತವ್ಯ ನಿರ್ವಹಣೆಗಾಗಿ ನಿಗದಿಪಡಿಸಲಾದ ಸೂತ್ರಗಳು:**

ಪ್ರಾಧಿಕಾರದ ಕಾರ್ಯನಿರ್ವಹಣೆಯು ವಿವಿಧ ಕಾಯ್ದೆಗಳಲ್ಲಿ ನೀಡಿರುವ ಸೂಚನೆಗಳಂತೆ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ವಿವಿಧ ಹಂತಗಳಲ್ಲಿ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತದೆ.

**ಪ್ರಾಧಿಕಾರದಲ್ಲಿ ಈ ಕೆಳಕಂಡ ನಿಯಮ/ ಕಾಯ್ದೆಗಳನ್ನು ಪರಿಗಣಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.**

a) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961.
b) ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965.
c) ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ, 1964.
d) ಕರ್ನಾಟಕ ಸಿನಿಮಾ (Regulations) ಕಾಯ್ದೆ, 1964.
e) ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956.
f) ಕರ್ನಾಟಕ ರಾಜ್ಯ ಹೆದ್ದಾರಿ ಅಧಿನಿಯಮ,1964.
g) ಕರ್ನಾಟಕ ಸ್ಲಂ ಏರಿಯಾ ಕಾಯ್ದೆ, 1973.
h) ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಕಾಯ್ದೆ, 1966.
i) ಕರ್ನಾಟಕ ಗೃಹ ಮಂಡಳಿ (K.H.B) ಕಾಯ್ದೆ, 1962.
j) ಕೆ.ಸಿ.ಎಸ್.ಆರ್, 1957.
k) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಾಯ್ದೆ (ಕೆ.ಎಸ್.ಪಿ.ಸಿ.ಬಿ)

**ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು:**

1) ಅನುಮೋದಿತ ಮಧ್ಯಂತರ ಮಹಾ ಯೋಜನೆ (Interim Master Plan) ನಕ್ಷೆಗಳು ಹಾಗೂ ವರದಿ.
2) ಅನುಮೋದಿತ ಮಹಾ ಯೋಜನೆ -2031 ( Master Plan-2031) ನಕ್ಷೆಗಳು ಹಾಗೂ ವರದಿ.
3) ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳ ನಕ್ಷೆಗಳು.
4) ಅನುಮೋದಿತ ವಿನ್ಯಾಸ ನಕ್ಷೆಗಳ ಕಡತಗಳು.
5) ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾದ ಕಡತಗಳು.
6) ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾದ ಕಡತಗಳು.
7) ಆಯವ್ಯಯ, ನಗದು ಪುಸ್ತಕಗಳು.
8) ದಾಸ್ತಾನು ಪುಸ್ತಕ.

**ಮಾಹಿತಿ ಹಕ್ಕು ಅಧಿನಿಯಮ -2005 ರ ನಿಯಮಗಳ ಅಡಿಯಲ್ಲಿ ಪ್ರಾಧಿಕಾರದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು:**

1. ಸಕ್ಷಮ ಪ್ರಾಧಿಕಾರ – ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ನೆಲಮಂಗಲ ಯೋಜನಾ ಪ್ರಾಧಿಕಾರ.
2. ಅಪೀಲು ಪ್ರಾಧಿಕಾರ – ಸದಸ್ಯ-ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ.

**ಅಂತರ್ ಜಾಲ (website)**

ನೆಲಮಂಗಲ ಯೋಜನಾ ಪ್ರಾಧಿಕಾರದ ಮಾಹಿತಿಯು ಅಂತರ್‌ಜಾಲ **website:www.npa.in** ರಲ್ಲಿ ಲಭ್ಯವಿದ್ದು, ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ. ಹಾಗೂ ನೆಲಮಂಗಲ ಯೋಜನಾ ಪ್ರಾಧಿಕಾರದ ಕಛೇರಿಯು 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:**

ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳ ಕುರಿತಂತೆ ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

1. **ಭೂ ಪರಿವರ್ತನೆ :** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಜಮೀನುಗಳ ಭೂ ಪರಿವರ್ತನೆ ಬಗ್ಗೆ ಅಭಿಪ್ರಾಯ ನೀಡಲು ಮಾನ್ಯ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತಿದ್ದು, ಸದರಿ ಪ್ರಕರಣಗಳನ್ನು ಸರ್ಕಾರ ದಿಂದ ಅಂತಿಮ ಅನುಮೋದನೆಯಾದ ಮಹಾ ಯೋಜನೆ-2031 (M.P-2031) ರ ಭೂ ಉಪಯೋಗ ಹಾಗೂ ವಲಯ ನಿಯಮಗಳಂತೆ ಪರಿಶೀಲಿಸಿ, ಭೂ ಪರಿವರ್ತನೆಗೆ ಅಭಿಪ್ರಾಯಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆ ಯಿಂದ ಈ ಪ್ರಾಧಿಕಾರದಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಭೂಪರಿವರ್ತನೆ ಮಾಡುವ ಬಗ್ಗೆ **156** ಪ್ರಕರಣಗಳನ್ನು ಸ್ವೀಕರಿಸಿದ್ದು, ಅವುಗಳಿಗೆ ಈ ಕಛೇರಿಯಿಂದ ಅಭಿಪ್ರಾಯ ನೀಡಲಾಗಿದೆ.

2. **ವಿನ್ಯಾಸ ಅನುಮೋದನೆ :** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಬರುವ ಜಮೀನುಗಳಿಗೆ ಉದ್ದೇಶಿತ ಉಪಯೋಗಕ್ಕೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಪಡೆದ ಭೂ ಪರಿವರ್ತನಾ ಆದೇಶ ಹಾಗೂ ದಾಖಲಾತಿಗಳೊಂದಿಗೆ ಅರ್ಜಿದಾರರು ಪ್ರಾಧಿಕಾರಕ್ಕೆ ವಿನ್ಯಾಸ ಅನುಮೋದನೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಗಳನ್ವಯ ಪ್ರಾಧಿಕಾರ ದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು, ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17 ರಂತೆ ತಾತ್ಕಾಲಿಕ ಅನುಮೋದನೆ ನೀಡಲಾಗುತ್ತಿದೆ. ಸರ್ಕಾರದ ಸುತ್ತೋಲೆಯಂತೆ ವಸತಿ ಬಡಾವಣೆ ಮಾಲೀಕರು ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ (ರಸ್ತೆ, ಸಿಡಿ ವರ್ಕ್ ಹಾಗೂ ಚರಂಡಿ ಕೆಲಸಗಳು) ಸಂಪೂರ್ಣಗೊಳಿಸಿ ಉದ್ಯಾನವನ / ಬಯಲು ಜಾಗ / ನಾಗರೀಕ ಸೌಲಭ್ಯದ ನಿವೇಶನ ಮತ್ತು ರಸ್ತೆಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಅರ್ಜಿದಾರರು ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ನಂತರ ಸಂಬಂಧಿಸಿದ ಇಲಾಖೆಗಳಿಂದ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಗೊಳಿಸಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಪ್ರಾಧಿಕಾರಕ್ಕೆ ಹಾಜರುಪಡಿಸಿ ವಿನ್ಯಾಸದಲ್ಲಿ ಶೇ.100% ರಷ್ಟು ನಿವೇಶನಗಳ ಬಿಡುಗಡೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ನಂತರ ಪ್ರಾಧಿಕಾರದಿಂದ ಸದರಿ ವಿನ್ಯಾಸವನ್ನು ಅನುಮೋದಿತ ನಕ್ಷೆಯಂತೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿದ ಬಗ್ಗೆ ಪರಿವೀಕ್ಷಣೆ ಕೈಗೊಂಡು ಖಚಿತಪಡಿಸಿಕೊಂಡ ನಂತರ ಶೇ.100% ರಷ್ಟು ನಿವೇಶನಗಳನ್ನು ಪ್ರಾಧಿಕಾರದ ವತಿಯಿಂದ ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತದೆ. ಪ್ರಸ್ತುತ ಸಾಲಿನಲ್ಲಿ **10** ಬಹುನಿವೇಶನ ವಿನ್ಯಾಸಗಳಿಗೆ ಮತ್ತು **18** ಏಕ ನಿವೇಶನ ವಿನ್ಯಾಸಗಳಿಗೆ ಒಟ್ಟು **28** ರೂಪುರೇಖೆಗಳಿಗೆ ಅನುಮೋದನೆ ನೀಡಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ. ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2015 ರಂತೆ ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

3. **ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ :** ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕಟ್ಟಡ ಕಟ್ಟಲು ಉದ್ದೇಶಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 15 ರಂತೆ ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಸಲ್ಲಿಸಿದ ಅರ್ಜಿಗಳನ್ನು, ಅನುಮೋದಿತ ವಲಯ ನಿಯಮಾವಳಿಯಂತೆ ತಾಂತ್ರಿಕವಾಗಿ ಪರಿಶೀಲಿಸಿ, ಪ್ರಾಧಿಕಾರದ ಅಭಿಪ್ರಾಯದೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ.
   ಪ್ರಸ್ತುತ ಸಾಲಿನಲ್ಲಿ **82** ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ.

4. **ಮಹಾಯೋಜನೆ** (M.P): ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ-2031 ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ರ ಕಲಂ 13 (3) ರನ್ವಯ ಸರ್ಕಾರದ ಆದೇಶ ಸಂಖ್ಯೆ. ನಅಇ:150:ಬಿಎಂಆರ್:2013 ಬೆಂಗಳೂರು ದಿನಾಂಕ:01-06-2015 ರಲ್ಲಿ ಅಂತಿಮ ಅನುಮೋದನೆ ನೀಡಲಾಗಿದೆ.

   ಪ್ರಸ್ತುತ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸೋಲೂರು ಟೌನ್‌ಶಿಪ್‌ಗೆ ಒಳಪಡುವ ಗ್ರಾಮಗಳಿಗೆ ಮಹಾಯೋಜನೆಯನ್ನು ತಯಾರಿಸಬೇಕಾಗಿದ್ದು, ಸದರಿ ಪ್ರದೇಶಕ್ಕೆ ಮಹಾ ಯೋಜನೆ ತಯಾರಿಸಲು ಕ್ರಮ ಜರುಗಿಸಲಾಗುತ್ತಿದೆ.

5. **ಅಭಿವೃದ್ಧಿ ಕಾಮಗಾರಿಗಳು:** ದಿನಾಂಕ:15-09-2017 ರ ನೆಲಮಂಗಲ ಯೋಜನಾ ಪ್ರಾಧಿಕಾರದ 87ನೇ ಸಭೆಯ ವಿಷಯ ಸಂಖ್ಯೆ.87.8.6 ರಲ್ಲಿ ಕೈಗೊಂಡ ನಿರ್ಣಯದಂತೆ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹಣದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿಯ ಕೆಲವು ಗ್ರಾಮಗಳಲ್ಲಿ ರೂ.130.00 ಲಕ್ಷಗಳ (ರೂ.ಒಂದು ನೂರ ಮೂವತ್ತು ಲಕ್ಷಗಳು ಮಾತ್ರ) ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ:173:ಬಿಎಂಆರ್:2017, ಬೆಂಗಳೂರು ದಿನಾಂಕ:12-01-2018 ಮತ್ತು ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ.ನಅಇ:173:ಬಿಎಂಆರ್:2017 ದಿನಾಂಕ:17-03-2018 ರಲ್ಲಿ ಮತ್ತು ದಿನಾಂಕ:20-11-2017 ರ ನೆಲಮಂಗಲ ಯೋಜನಾ ಪ್ರಾಧಿಕಾರದ 88ನೇ ಸಭೆಯ ವಿಷಯ ಸಂಖ್ಯೆ.88.11.5 ರಲ್ಲಿ ಕೈಗೊಂಡ ನಿರ್ಣಯದಂತೆ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರ ದಲ್ಲಿ ಲಭ್ಯವಿರುವ ಹಣದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ ಹಾಗೂ ಸೋಲೂರು ಹೋಬಳಿ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ತ್ಯಾಮಗೊಂಡ್ಲು ಹೋಬಳಿ ಮತ್ತು ಸೋಂಪುರ ಹೋಬಳಿಗಳ ಕೆಲವು ಗ್ರಾಮಗಳಲ್ಲಿ ರೂ.2065 ಲಕ್ಷಗಳ (ರೂ.ಎರಡು ಸಾವಿರದ ಅರವತ್ತೈದು ಲಕ್ಷಗಳು ಮಾತ್ರ) ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ:16:ಬಿಎಂಆರ್:2018, ಬೆಂಗಳೂರು ದಿನಾಂಕ:08-03-2018 ರಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್) ಸಂಸ್ಥೆಯ ಮುಖಾಂತರ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಸರ್ಕಾರದ ಆದೇಶಗಳನ್ವಯ ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿರ್ದೇಶನಗಳನ್ವಯ ಷರತ್ತುಗಳನ್ನು ವಿಧಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಮುಂಗಡವಾಗಿ ಮೊದಲನೇ ಹಂತದ ಶೇಕಡಾ 40 ರ ಮೊತ್ತ ಕ್ರಮವಾಗಿ ರೂ.52 ಲಕ್ಷಗಳು (ರೂ. ಐವತ್ತೆರಡು ಲಕ್ಷಗಳು ಮಾತ್ರ) ಮತ್ತು ರೂ.825 ಲಕ್ಷಗಳು (ರೂ.ಎಂಟು ನೂರ ಇಪ್ಪತ್ತೈದು ಲಕ್ಷಗಳು ಮಾತ್ರ) ಗಳನ್ನು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಗೆ ನೀಡಲಾಗಿದೆ.

**ಪ್ರಾಧಿಕಾರದ ಸಭೆಗಳು:**

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಒಟ್ಟು 08 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ನಿಯಮಾನು ಸಾರ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

**ನೆಲಮಂಗಲ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ :**

ಸರ್ಕಾರದ ಆದೇಶದಂತೆ ನೆಲಮಂಗಲ ಯೋಜನಾ ಪ್ರಾಧಿಕಾರದ ಕಛೇರಿಯು ದಿನಾಂಕ:31-08-2001 ರಿಂದ ಕಾರ್ಯಾರಂಭ ಮಾಡಿದ್ದು, ಪ್ರಸ್ತುತ 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಅಧ್ಯಕ್ಷರು ಕಛೇರಿಯ ಮುಖ್ಯಸ್ಥರಾಗಿದ್ದು, ಸದಸ್ಯ-ಕಾರ್ಯದರ್ಶಿಗಳು ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದು, ಕಛೇರಿಯ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ 1) ನಅಇ:91:ಬೆಂರೂಪ್ರಾ:01:ಬೆಂಗಳೂರು, ದಿನಾಂಕ:11-05-2001, 2) ನಅಇ:273:ಬಿಎಂಆರ್:2009, ಬೆಂಗಳೂರು ದಿನಾಂಕ:13-10-2009, ಮತ್ತು 3)ನಅಇ:57:ಬಿಎಂಆರ್:2010,ಬೆಂಗಳೂರು ದಿನಾಂಕ:06-10-2010 ರಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿ ಈ ಹುದ್ದೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಿಯೋಜನೆ ಮೇಲೆ ನೇಮಕ ಮಾಡಲು ಸೂಚಿಸಿದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ:93ನೆಯೋಸೇ:2009 ಬೆಂಗಳೂರು ದಿನಾಂಕ:26-08-2009 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರನ್ನು ಸದಸ್ಯ-ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಅದರಂತೆ ಮಂಜೂರಾದ / ಭರ್ತಿ ಆಗಿರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

**ಮಂಜೂರಾದ / ಭರ್ತಿ ಆಗಿರುವ ಹುದ್ದೆಗಳ ವಿವರ**

| ಕ್ರ.ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆ | ಭರ್ತಿ ಆಗಿರುವ ಹುದ್ದೆ | ಖಾಲಿ ಇರುವ ಹುದ್ದೆ |
|---|---|---|---|---|
| 1. | ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು / ಸದಸ್ಯ ಕಾರ್ಯದರ್ಶಿ | 01 | 01 | – |
| 2. | ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು | 01 | 01 | – |
| 3. | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | 01 | 01 | – |

| | | | | |
|---|---|---|---|---|
| 4. | ನಗರ ಯೋಜಕರು | 02 | 01 | 01 |
| 5. | ಸಹಾಯಕ ನಗರ ಯೋಜಕರು | 01 | – | 01 |
| 6. | ಪ್ರಥಮ ದರ್ಜೆ ಸಹಾಯಕರು | 01 | 01 | – |
| 7. | ಬೆರಳಚ್ಚುಗಾರರು | 01 | – | 01 |
| 8. | ಗ್ರೂಪ್ 'ಡಿ' | 01 | 01 | – |
| | **ಒಟ್ಟು** | **09** | **06** | **03** |

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಬಾಹ್ಯ ಮೂಲದಿಂದ (Out Source) ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ.

**ಬಾಹ್ಯ ಮೂಲದಿಂದ (Out Source) ಸೇವೆ ಪಡೆದಿರುವ ನೌಕರರ ವಿವರ**

| | | |
|---|---|---|
| 1. | ತಾಂತ್ರಿಕ (CAD) ಸಹಾಯಕ | 01 |
| 2. | ಕಂಪ್ಯೂಟರ್ ಆಪರೇಟರ್ ಕಮ್ ಟೈಪಿಸ್ಟ್ಸ್ | 02 |
| 3. | ಡಾಟಾ ಎಂಟ್ರಿ ಆಪರೇಟರ್ | 01 |
| 4. | ಗ್ರೂಪ್ 'ಡಿ' ನೌಕರ | 01 |
| 5. | ಕಛೇರಿ ಸಹಾಯಕ (ಗ್ರೂಪ್ 'ಡಿ' ನೌಕರ) | 01 |
| 6. | ಕಛೇರಿ ಸ್ವಚ್ಛತೆ ಸಿಬ್ಬಂದಿ | 01 |

ಹಾಗೂ ಪ್ರಾಧಿಕಾರದ ಅಧ್ಯಕ್ಷರ ಉಪಯೋಗಕ್ಕಾಗಿ ಬಾಹ್ಯ ಮೂಲದಿಂದ (Out Source) ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗುತ್ತಿದೆ.

| | | |
|---|---|---|
| 1. | ಆಪ್ತ ಸಹಾಯಕ | 01 |
| 2. | ಗ್ರೂಪ್ 'ಡಿ'ನೌಕರ | 01 |

**ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸುವ ಬಗ್ಗೆ :**

ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ, ನೆಲಮಂಗಲ ಗ್ರಾಮ ಸ.ನಂ.213 ರಲ್ಲಿನ 10 ಎಕರೆ–23 ಗುಂಟೆ ಜಮೀನಿನ ಅನುಮೋದಿತ ವಿನ್ಯಾಸದಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ 2142.28 ಚ.ಮೀ ವಿಸ್ತೀರ್ಣದ ನಿವೇಶನದಲ್ಲಿ ಪ್ರಾಧಿಕಾರದ ಕಛೇರಿ ಕಟ್ಟಡ ನಿರ್ಮಿಸುವ ಬಗ್ಗೆ ದಿನಾಂಕ:09–10–2009 ರಂದು ಜರುಗಿದ 41ನೇ ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಗಿತ್ತು. ಕಛೇರಿ ಕಟ್ಟಡವನ್ನು ಅಧಿಕೃತ ಸರ್ಕಾರಿ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಲಾದ ರೂ 1,25,00,000–00 (ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳ ಅಂದಾಜು ಪಟ್ಟಿ ಮತ್ತು ರೂ.9,50,000–00 ಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ:ನಅಇ:333:ಬಿಎಂಆರ್:2010 ಬೆಂಗಳೂರು ದಿನಾಂಕ:03–12–2010 ರಲ್ಲಿ ಮತ್ತು ನಅಇ:44: ಬಿಎಂಆರ್:2015 ದಿನಾಂಕ:24–06–2015 ರಲ್ಲಿ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ಕಟ್ಟಡ ನಿರ್ಮಿಸಿ ದಿನಾಂಕ:11–11–2015 ರಂದು ಕಟ್ಟಡವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದು, ಪ್ರಸ್ತುತ ಸದರಿ ಕಟ್ಟಡದಲ್ಲಿ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ.

**ಪ್ರಾಧಿಕಾರದ ಆಯ ವ್ಯಯ (Budget):**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68 (ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ಸೆಕ್ಷನ್ 22 ರನ್ವಯ ನೆಲಮಂಗಲ ಯೋಜನಾ ಪ್ರಾಧಿಕಾರದ 2018–19 ನೇ ಸಾಲಿನ ಅಂದಾಜು ಆಯ ವ್ಯಯವನ್ನು ತಯಾರಿಸಿ ದಿನಾಂಕ:15–02–2018 ರಂದು ನಡೆದ ಪ್ರಾಧಿಕಾರದ 90 ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಪಡೆದು, ಆಯವ್ಯಯವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ:447:ಮೈಅಪ್ರಾ:2016 ದಿನಾಂಕ:19–04–2017 ರನ್ವಯ ಪ್ರಾಧಿಕಾರದ ಪತ್ರ ದಿನಾಂಕ:28–02–2018 ರಂದು ಅನುಮೋದನೆಗಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ ಹಾಗೂ ಪ್ರತಿಗಳನ್ನು ಸರ್ಕಾರದ

ಅವಗಾಹನೆಗಾಗಿ ಸಲ್ಲಿಸಲಾಗಿರುತ್ತದೆ. ಸದರಿ ಆಯವ್ಯಯದಲ್ಲಿ 2018–19 ನೇ ಸಾಲಿಗೆ ರೂ.73,25,91,491–00 ಆದಾಯ ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಉತ್ತಮತೆ ಶುಲ್ಕದ ಶೇ 5%ರ ಮೊತ್ತ ನೀಡುವ ಸಂಬಂಧ ರೂ.20,00,000–00 ಗಳನ್ನು ಕಾಯ್ದಿರಿಸಲಾಗಿದೆ.

**ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು :**

2017–18 ನೇ ಸಾಲಿನ ಆದಾಯ ಮತ್ತು ವೆಚ್ಚಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ. | ತಿಂಗಳು | ಆದಾಯ (ರೂ.ಗಳಲ್ಲಿ) | ವೆಚ್ಚ (ರೂ.ಗಳಲ್ಲಿ) |
|---|---|---|---|
| 1. | ಏಪ್ರಿಲ್ – 2017 | 65,82,609–00 | 5,50,025–00 |
| 2. | ಮೇ – 2017 | 49,26,964–00 | 26,20,015–00 |
| 3. | ಜೂನ್ – 2017 | 36,537–00 | 15,79,614–00 |
| 4. | ಜುಲೈ – 2017 | 16,24,226–00 | 7,07,484–00 |
| 5. | ಆಗಸ್ಟ್ – 2017 | 1,91,63,384–00 | 7,55,896–00 |
| 6. | ಸೆಪ್ಟೆಂಬರ್ – 2017 | 34,81,168–00 | 3,31,359–50 |
| 7. | ಅಕ್ಟೋಬರ್– 2017 | 32,50,498–00 | 7,60,600–00 |
| 8. | ನವೆಂಬರ್ – 2017 | 33,07,250–00 | 3,69,612–00 |
| 9. | ಡಿಸೆಂಬರ್ – 2017 | 8,76,773–00 | 12,18,716–00 |
| 10. | ಜನವರಿ – 2018 | 70,64,234–00 | 6,68,679–00 |
| 11. | ಫೆಬ್ರವರಿ – 2018 | 43,12,202–00 | 7,05,937–00 |
| 12. | ಮಾರ್ಚ್ – 2018 | 7,82,632–00 | 8,82,11,303–00 |

**2016–17 ನೇ ಸಾಲಿನ ಲೆಕ್ಕ ತನಿಖಾ ವರದಿ ಬಗ್ಗೆ:**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 68 (ಸಿ) (2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ನಿಯಮ 23 (2) ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರದ 2016–17 ನೇ ಸಾಲಿನ ಲೆಕ್ಕ ತನಿಖೆಯನ್ನು ಹಿರಿಯ ಉಪ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಂಗಳೂರು ಇವರು ದಿನಾಂಕ:22–05–2017 ರಿಂದ 27–05–2017 ರವರೆಗೆ ಕೈಗೊಂಡಿದ್ದು, ಲೆಕ್ಕ ತನಿಖಾ ವರದಿಯನ್ನು ಈ ಕಛೇರಿಯಲ್ಲಿ ದಿನಾಂಕ:16–03–2018 ರಂದು ಸ್ವೀಕರಿಸಲಾಗಿದೆ.

2016–17 ನೇ ಸಾಲಿನ ಲೆಕ್ಕ ತನಿಖಾ ವರದಿ ಬಗ್ಗೆ ಅನುಸರಣಾ ವರದಿಯನ್ನು ತಯಾರಿಸಿ, ಪ್ರಾಧಿಕಾರದ ಮುಂದಿನ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು. ಲೆಕ್ಕ ತನಿಖಾ ವರದಿಯಲ್ಲಿನ ಆಕ್ಷೇಪಣೆ / ವಸೂಲಾತಿ ಬಗ್ಗೆ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರದ 2016–17 ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

**ಸಹಿ/–**
**ಜಂಟಿ ನಿರ್ದೇಶಕರು**
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ **ಸದಸ್ಯ–ಕಾರ್ಯದರ್ಶಿ**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

## ನಮೂನೆ–2ಪಿ

### 31 ನೇ ಮಾರ್ಚ್ –2018 ರ ಅಂತ್ಯಕ್ಕೆ ನೆಲಮಂಗಲ ಯೋಜನಾ ಪ್ರಾಧಿಕಾರದ ಬಾಕಿ ತಖ್ತೆಯ ವಿವರಗಳು

| ಕ್ರ.ಸಂ | ಸಾಲಗಳು | | ಕ್ರ.ಸಂ. | ಚರ ಮತ್ತು ಸ್ಥಿರಾಸಿಗಳು | |
|---|---|---|---|---|---|
| 1. | ಕೆಳಗಿನ ವಿಧಾನದಲ್ಲಿ ಸರ್ಕಾರ ದಿಂದ ಪಡೆದ ಹಣಕಾಸಿನ ವಿವರಗಳು | – | 1. | ಭೂಮಿ ಹಾಗು ಕಟ್ಟಡಗಳು (ಸವಕಳೆವೆಚ್ಚದ ಹೊರಗಾಗಿನ ಮೊತ್ತ) | – |
| ಎ. | ಸಾಲಗಳು | – | 2. | ಮಿಷನರಿ ಹಾಗೂ ಪೀಠೋಪಕರಣಗಳು | – |
| ಬಿ. | ಮುಂಗಡ ಹಣ | – | 3. | ಮುಂಗಡಗಳು (ವಸೂಲಿ ಮಾಡಬಹುದಾದಂತಹ ಹಣ) | – |
| ಸಿ. | ಅನುದಾನಗಳು | – | 4. | ಇತರೆ ಆಸ್ತಿಗಳ ವಿವರ | – |
| ಡಿ. | ಸಾಲದ ಬಾಕಿ ವಿವರಗಳು | – | 5. | ಕೈಯಲ್ಲಿನ ಹಣ | – |
| 2. | ಠೇವಣಿಗಳು | 34,40,00,000–00 | 6. | ಬ್ಯಾಂಕ್‌ನಲ್ಲಿನ ಹಣ (ಉಳಿತಾಯ ಖಾತೆಯಲ್ಲಿ) | 16,85,66,932–19 |
| 3. | ಖರ್ಚಿನ ಹೊರತಾಗಿ ಗಳಿಸಿದ ಆದಾಯ | – | 7. | ಸಾದಿಲ್ವಾರು ಮುಂಗಡ ಹಣ | – |
| | **ಒಟ್ಟು** | **34,40,00,000–00** | | | **16,85,66,932–19** |

**ಸಹಿ/–**
**ಜಂಟಿ ನಿರ್ದೇಶಕರು**
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ **ಸದಸ್ಯ–ಕಾರ್ಯದರ್ಶಿ**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

# ಅನುಬಂಧ–1

**ನೆಲಮಂಗಲ ಯೋಜನಾ ಪ್ರಾಧಿಕಾರದ 2016–17 ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳು ಹಾಗೂ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರಗಳು.**

| ಕ್ರ.ಸಂ | ಕಂಡಿಕೆ ಸಂಖ್ಯೆ | ಪ್ರಮುಖವಾದ ನ್ಯೂನತೆಗಳು | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | 04 | ಹಿಂದಿನ ಸಾಲಿನ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು. | – | – |
| 2. | 18 | ರಸೀದಿಗಳಿಂದ ವಸೂಲಿಸಿದ ಚೆಕ್ / ಡಿಡಿ ಮೊತ್ತಗಳನ್ನು ವಿಳಂಬವಾಗಿ ಜಮೆ ಮಾಡಿರುವುದು. | – | – |
| 3. | 24 | M.P(P) Map, CD,Z.R & A3 size colour map book ಮಾರಾಟ ದಾಸ್ತಾನು ವಿತರಣೆ ನಿರ್ವಹಿಸದಿರುವುದು. | – | – |
| 4. | 26 | ಸಿ.ಎ. ನಿವೇಶನ ಪಾರ್ಕ್‌ಗಳ ವಿವರಗಳನ್ನು ಹಾಜರುಪಡಿಸದೇ ಇರುವುದು. | – | – |
| 5. | 27 | ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಬಡಾವಣೆಗಳು 5 ವರ್ಷ ವಾದರೂ ಅಭಿವೃದ್ಧಿಪಡಿಸದೇ ಇರುವುದು. | – | – |
| 6. | 29 | ಬಡಾವಣೆ ನಕ್ಷೆ ಅನುಮೋದನೆ ನೀಡುವಾಗ ನಿಯಮ ಉಲ್ಲಂಘಿಸಿ ಕಡಿಮೆ ಉತ್ತಮತೆ ಶುಲ್ಕ ವಸೂಲಿಸಿರುವುದು. | 175447000 | – |
| 7. | 30 | ನಿವೇಶನ ಉತ್ತಮತೆ ಶುಲ್ಕ ವಿಧಿಸದೇ ಕೈಬಿಟ್ಟಿರುವುದು. | – | 4985 |
| 8. | 31 | ವಸತಿ ಉದ್ದೇಶಕ್ಕಾಗಿ ಕಟ್ಟಡ ನಿರ್ಮಿಸಲು ಪ್ರಾರಂಭಿಕ ಪತ್ರ ವಿತರಿಸುವಾಗ ಕಡಿಮೆ ಉತ್ತಮತೆ ಶುಲ್ಕ ವಿಧಿಸಿರುವುದು. | – | 1277 |
| 9. | 32 | ದಿನವಹಿಯನ್ನು ನಿರ್ವಹಿಸದಿರುವುದು. | – | – |
| 10. | 36 | ಪಿಂಚಣಿ ವಂತಿಕೆಯನ್ನು ಕಡಿಮೆ ಜಮೆ ಮಾಡಿರುವುದು. | 223658 | – |
| | | **ಒಟ್ಟು** | **175670658** | **6262** |

**ಸಹಿ/–**
**ಜಂಟಿ ನಿರ್ದೇಶಕರು**
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ **ಸದಸ್ಯ–ಕಾರ್ಯದರ್ಶಿ**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

# ಅನುಬಂಧ–2

| ನೆಲಮಂಗಲ ಯೋಜನಾ ಪ್ರಾಧಿಕಾರ | | | | | |
|---|---|---|---|---|---|
| 2016–17 ನೇ ಸಾಲಿನ ಜಮೆ ಮತ್ತು ಖರ್ಚು ವಿವರ | | | | | |
| ಕ್ರ.ಸ | ಜಮೆ | ಮೊತ್ತ | ಕ್ರ.ಸ | ಖರ್ಚು | ಮೊತ್ತ |
| 1. | ಉತ್ತಮತೆ ಶುಲ್ಕ | 1,56,50,195 | 1. | ಅಧಿಕಾರಿ/ಸಿಬ್ಬಂದಿ ವೇತನ | 41,09,549 |
| 2. | ಪರಿಶೀಲನಾ ಶುಲ್ಕ | 2,20,450 | 2. | ಅಧ್ಯಕ್ಷರ ಗೌರವಧನ | 1,28,129 |
| 3. | ಉಸ್ತುವಾರಿ ಶುಲ್ಕ | 69,000 | 3. | ದೂರವಾಣಿ ವೆಚ್ಚ | 63,407 |
| 4. | ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ದಾಖಲಾತಿ ನೀಡುವ ಶುಲ್ಕ | 12,188 | 4. | ವಿದ್ಯುತ್ ವೆಚ್ಚ (KEB) | 39,026 |
| 5. | ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕೃತವಾದ ಅರ್ಜಿ ಶುಲ್ಕ | 2,300 | 5. | ಗಣಕ ಯಂತ್ರದ ಪ್ರಿಂಟರ್‌ಗಳಿಗೆ ಕಾಟ್ರಿಡ್ಜ್ ಖರೀದಿ ಬಾಬ್ತು | 22,777 |
| 6. | ಭದ್ರತಾ ಠೇವಣಿ ಶುಲ್ಕ | 53,79,550 | 6. | ಜೆರಾಕ್ಸ್ ಯಂತ್ರದ ಟೋನರ್ ಕಾಟ್ರಿಡ್ಜ್ ಖರೀದಿ ಹಾಗೂ ದುರಸ್ತಿ ಬಾಬ್ತು | 41,871 |
| 7. | ಧೃಢೀಕೃತ ನಕ್ಷೆ / ದಾಖಲಾತಿ ನೀಡುವ ಶುಲ್ಕ | 25,624 | 7. | ಬಾಡಿಗೆ ಆಧಾರದ ವಾಹನ ಬಾಬ್ತು | 11,67,578 |
| 8. | ವಿಭಜನೆ ಶುಲ್ಕ | 1,150 | 8. | ಕಛೇರಿ ಕೈ ಹಣ | 67,399 |
| 9. | ಕೆರೆಗಳ ಸಂರಕ್ಷಣೆ ಶುಲ್ಕ ಹಾಗೂ ಕೆರೆಗಳ ಸಂರಕ್ಷಣೆ ಶುಲ್ಕದ ಬಡ್ಡಿ | 2,12,81,200 | 9. | ಅಂಚೆ ಚೀಟಿ ಖರೀದಿ ಬಾಬ್ತು | 16,000 |
| 10. | ಬ್ಯಾಂಕ್ ಬಡ್ಡಿ ಬಾಬ್ತು | 49,47,728 | 10. | ಕರ್ನಾಟಕ ರಾಜ್ಯ ಪತ್ರ ಸಾರ್ವಜನಿಕ ಪ್ರಕಟಣೆ ಬಾಬ್ತು | 1,790 |
| 11. | M.P(P) Map, CD,Z.R & A3 size colour map book ÔÅìÆ²µÆ® | 1,200 | 11. | ಹೊರಗುತ್ತಿಗೆ ನೌಕರರ ವೇತನ ಪಾವತಿ | 9,85,228 |
| 12. | ಇತರೆ | 1,930 | 12. | ಪ್ರಿಂಟಿಂಗ್ / ಮುದ್ರಣ ವೆಚ್ಚ | 40,250 |
| 13. | ದಂಡ | 17,97,500 | 13. | ಲೇಖನಾ ಸಾಮಗ್ರಿ ವೆಚ್ಚ | 34,562 |
| 14. | ಪ್ರಾಧಿಕಾರದ ವಿಜಯಾ ಬ್ಯಾಂಕ್ ಖಾತೆಯಿಂದ ಎಸ್.ಬಿ.ಎಂ ಖಾತೆಗೆ ಜಮೆ ಮಾಡಲಾದ ಮೊತ್ತ | 5,00,000 | 14. | ಪೀಠೋಪಕರಣ ಖರೀದಿ ಬಾಬ್ತು | 2,92,128 |
| 15. | ಪಕ್ವವಾದ ನಿಶ್ಚಿತ ಠೇವಣಿ ಮೊತ್ತ ಖಾತೆಗೆ ಜಮೆ | 68,27,01,476 | 15. | ವಕೀಲರ ಬಿಲ್ ಪಾವತಿ | 36,450 |
| | | | 16. | ಉತ್ತಮತೆ ಶುಲ್ಕದ ಶೇ.5 ರಷ್ಟು ಮೊತ್ತ KSTPB ಗೆ ಪಾವತಿಸಿದ ಬಾಬ್ತು | 12,55,257 |
| | | | 17. | ಮಾಹಿತಿ ಹಕ್ಕು ಶುಲ್ಕ ಪಾವತಿ | 1,560 |
| | | | 18. | IT/ TDS ಪಾವತಿ | 1,52,045 |
| | | | 19. | DSC Key ವೆಚ್ಚ | 2,500 |
| | | | 20. | ಹಿಂಪಾವತಿ | 8,810 |
| | | | 21. | ವಿನ್ಯಾಸ ಅರ್ಜಿದಾರರಿಗೆ ಶುಲ್ಕ ಹಿಂಪಾವತಿ | 24,950 |
| | | | 22. | Satellite image ಪಡೆಯುವ ಸಂಬಂಧ ಬಿಎಂಆರ್‌ಡಿಎಗೆ ಪಾವತಿಸಲಾದ ಬಾಬ್ತು | 34,82,652 |
| | | | 23. | Window Blinds ಅಳವಡಿಸಿದ ಬಾಬ್ತು | 19,620 |
| | | | 24. | ಸ್ವಂತ ಕಛೇರಿ ಕಟ್ಟಡದಲ್ಲಿ ಅಲ್ಯೂಮಿನಿಯಂ ಪಾರ್ಟಿಷನ್ ಮಾಡಿಸಿದ ವೆಚ್ಚ | 1,73,952 |

| | | | | | |
|---|---|---|---|---|---|
| | | | 25. | EPABX Repair ಮಾಡಿಸಿದ ವೆಚ್ಚ | 14,847 |
| | | | 26. | UPS Repair & Battery ಖರೀದಿ ವೆಚ್ಚ | 67,007 |
| | | | 27. | ಸದಸ್ಯರ ಉಪಸ್ಥಿತಿ ಭತ್ಯೆ ಪಾವತಿ | 5,800 |
| | | | 28. | ತರಬೇತಿ ವೆಚ್ಚ | 11,500 |
| | | | 29. | ಇತರೆ | 5,532 |
| | | | 30. | ಪ್ರಾಧಿಕಾರದ ವಿಜಯಾ ಬ್ಯಾಂಕ್ ಖಾತೆಯಿಂದ ಎಸ್.ಬಿ.ಎಂ ಖಾತೆಗೆ ಜಮೆ ಮಾಡಲಾದ ಮೊತ್ತ | 5,00,000 |
| | | | 31 | ನಿಶ್ಚಿತ ಠೇವಣಿ ಮೊತ್ತ | 62,20,00,000 |
| | **ಒಟ್ಟು ಜಮೆ** | **73,25,91,491** | | **ಒಟ್ಟು ಖರ್ಚು** | **63,47,72,176** |
| | **ಪ್ರಾರಂಭಿಕ ಶಿಲ್ಕು (ನಗದು ಪುಸ್ತಕದಂತೆ)** | **1,90,45,189** | | **ಅಂತಿಮ ಶಿಲ್ಕು (ನಗದು ಪುಸ್ತಕದಂತೆ)** | **11,68,64,504** |
| | **ಒಟ್ಟು ಜುಮ್ಲಾ** | **75,16,36,680** | | **ಅಖೈರು ಶಿಲ್ಕು** | **75,16,36,680** |

**ಸಹಿ/-**
**ಜಂಟಿ ನಿರ್ದೇಶಕರು**
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ **ಸದಸ್ಯ-ಕಾರ್ಯದರ್ಶಿ**
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

# Nelamangala Planning Authority

Annual Report for the year **2017-18**

(For the Period From:01-04-2017 to 31-03-2018)

2nd Main Road, Sadashivanagar,
Nelamangala- 562123
Bangalore Rural District
**website. www.npa.in**

**Introduction:**

Nelamangala Planning Authority is one of the planning Authorities functioning under the state of Karnataka State Government which is constituted as per the statute of Karnataka Town & Country Planning Act,1961 and the Karnataka Planning Authority Rules, 1965. The Independent Planning Authority office is located in recently built building at 2nd Main Road, Sadashivanagar, Nelamangala-562123, Bengaluru Rural District. The chairman appointed by the State government will be the head of the office & The Member Secretary, being the chief executive officer of the office will look after all the activities of the office.

**Functioning of Nelamangala Planning Authority office since inception:**

Out of the Eleven (11) Independent Planning Authorities existing in Bengaluru Metropolitan Region, the Nelamangala Planning Authority is located at the North-West portion of Bengaluru Rural District. Earlier the developments in the area were controlled directly under the BMRDA Act as per the structure plan approved by government. In the structure plan, Nelamangala Local Planning Area comes under the Zones of APZ-2 & in IZ-2 (P) & 3 (P). Later, The Karnataka State Government has declared the Nelamangala Local Planning Area vide Government notification No:UDD:63:TTP:1996 Dated:27-01-1997 as per the clause 4 (A) of Karnataka Town & Country Planning Act, 1961.

The Nelamangala Local Planning Area consists of 243 villages of the entire Nelamangala Taluk, 42 villages of Bengaluru North Taluk, 60 villages of Magadi Taluk, Comprising in total 345 villages in its jurisdiction. The total extent of Local Planning Area is 735 sq.km (73408.85 Hectare).

In Government Notification no.UDD:141:BMR:2015 Dated:08-12-2015, Modified Nelamangala Local Planning Area is declared, consisting of 243 villages of Nelamangala Taluk, 42 villages of Bengaluru North Taluk, 60 villages of Magadi Taluk & 37 villages of Doddaballapur Taluk with a total of 382 villages in its jurisdiction. The total extent of Local Planning Area is 830.41 sq.km (83041.70 Hectare).

In Government Notification no.UDD:36:BMR:2016 Dated:24-06-2016, Satellite Town Ring Road (STRR) Local Planning Area is declared by including 64 full villages & 01 part village of Nelamangala Planning Area. Accordingly, Nelamangala Local Planning Area consists of 205 villages of Nelamangala Taluk, 42 villages of Bengaluru North Taluk, 34 villages of Magadi Taluk & 37 villages of Doddaballapur Taluk in total 318 villages in its jurisdiction. The Total extent of Local Planning Area reduced to 68880.15 Hectare.

